**ಸಿ.ಸಿ ನಂ. 860/2012**

**ಚಾ.ಸಾ-10 ಪ್ರಾ.ಸಾ-4**

**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ದಿಃ **01-08-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

| | | |
|---|---|---|
| ಹೆಸರು | : | ಮಲ್ಲಿಕಾರ್ಜುನ ಅಂದಾನೆಪ್ಪಾ ಗಾಣಿಗೇರ |
| ತಂದೆ ಹೆಸರು | : | ಅಂದಾನೆಪ್ಪಾ ಗಾಣಿಗೇರ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ.ಐ |
| ವಾಸಸ್ಥಳ | : | ತಲ್ಲೂರ ತಾಃ ಯರಗಟ್ಟಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2012 ರಿಂದ 2018 ರವರೆಗೆ ಗೋಕಾಕ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಎಎಸಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

1) ದಿಃ 24-01-2012 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಸಾಯಂಕಾಲ 7-00 ಗಂಟೆಗೆ ಜಪ್ತಿ ಪಂಚನಾಮೆ, ದೂರು, ಇಬ್ಬರು ಆರೋಪಿತರು ಹಾಗೂ ಮುದ್ದೆ ಮಾಲನ್ನು ನನಗೆ ಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ವಯ ಆರೋಪಿತನ ವಿರುದ್ಧ ಪ್ರ.ವ.ವ. ವರದಿಯನ್ನು ದಾಖಲಿಸಿಕೊಂಡು ಮೂಲ ಪ್ರ.ವ.ವ. ವನ್ನು ಪಿಸಿ-1830 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದೇ ದಿನದಂದು ಇಬ್ಬರು ಆರೋಪಿತರನ್ನು ಪಿಸಿ-1830, ಚಾಸಾ-8 ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

2) ಜಪ್ತಾದ ಮುದ್ದೆ ಮಾಲಿನ ಪೈಕಿ ಉಳಿದ ಮುದ್ದೆ ಮಾಲನ್ನು ಅಬಕಾರಿ ಇಲಾಖೆ ಗೋಕಾಕ ರವರಿಗೆ ದಿಃ 07-03-2012 ರಂದು ಕಳುಹಿಸಿರುತ್ತೇನೆ. ಜಪ್ತಾದ ಮುದ್ದೆ ಮಾಲಿನ ಪೈಕಿ ಎರಡು ಸ್ಯಾಂಪಲ ಬಾಟಲಗಳನ್ನು ರಸಾಯನಿಕ ಪರೀಕ್ಷೆಗಾಗಿ ಬೆಳಗಾವಿಗೆ ಚಾಸಾ-5 ರವರ ಮುಖಾಂತರ ಕಳುಹಿಸಿರುತ್ತೇನೆ. ದಿಃ 28-04-2012 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 28-04-2012 ರಂದು ತನಿಖೆ ಪೂರ್ಣಗೊಂಡಿದ್ದರಿಂದ ದೋ.ಪ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಮು.ಮಾ.1 ಹಾಗೂ 2 ನ್ನು ನೋಡಿ ಗುರುತಿಸುತ್ತೇನೆ, ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ.

ಸಾಕ್ಷಿಗೆ ಪ್ರ.ವ.ವ. ವರದಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ರಸಾಯನಿಕ ಪ್ರಯೋಗಾಲಯ ವರದಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 08-03-2012 ರ ಅಬಕಾರಿ ಇಲಾಖೆ ಗೋಕಾಕ ರವರಿಗೆ ನೀಡಿದ ಅರ್ಜಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

1) ದಿಃ 24-01-2012 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಸಾಯಂಕಾಲ 7-00 ಗಂಟೆಗೆ ಜಪ್ತಿ ಪಂಚನಾಮೆ, ದೂರು, ಇಬ್ಬರು

ಆರೋಪಿತರು ಹಾಗೂ ಮುದ್ದೆ ಮಾಲನ್ನು ನನಗೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ವಯ ಆರೋಪಿತನ ವಿರುದ್ಧ ಪ್ರ.ವ.ವ. ವರದಿಯನ್ನು ದಾಖಲಿಸಿಕೊಂಡು ಮೂಲ ಪ್ರ.ವ.ವ. ವನ್ನು ಪಿಸಿ-1830 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನದಂದು ಇಬ್ಬರು ಆರೋಪಿತರನ್ನು ಪಿಸಿ-1830, ಚಾಸಾ-8 ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

2) ಜಪ್ತಾದ ಮುದ್ದೆ ಮಾಲಿನ ಪೈಕಿ ಉಳಿದ ಮುದ್ದೆ ಮಾಲನ್ನು ಅಬಕಾರಿ ಇಲಾಖೆ ಗೋಕಾಕ ರವರಿಗೆ ದಿಃ 07-03-2012 ರಂದು ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಜಪ್ತಾದ ಮುದ್ದೆ ಮಾಲಿನ ಪೈಕಿ ಎರಡು ಸ್ಯಾಂಪಲ ಬಾಟಲಗಳನ್ನು ರಸಾಯನಿಕ ಪರೀಕ್ಷೆಗಾಗಿ ಬೆಳಗಾವಿಗೆ ಚಾಸಾ-5 ರವರ ಮುಖಾಂತರ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಿಃ 28-04-2012 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಿಃ 28-04-2012 ರಂದು ತನಿಖೆ ಪೂರ್ಣಗೊಂಡಿದ್ದರಿಂದ ದೋ.ಪ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-5 ಹಾಗೂ 8 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಿಂದ ಮು.ಮಾ.1 ಹಾಗೂ 2 ನ್ನು ವಿಲೇವಾರಿ ಮಾಡಲು ಈ ಪ್ರಕರಣದಲ್ಲಿ ಸೇರಿಸಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರ ಸರಿಯಲ್ಲ.

ಮು.ಮಾ.1 ಹಾಗೂ 2 ನ್ನು ನೋಡಿ ಗುರುತಿಸುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** --ಇಲ್ಲಾ --

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**
**C/c 2 ನೇ ಹೆ.ದಿ.&ನ್ಯಾ .ದಂ.,ಗೋಕಾಕ.**